BENNETT, COLEMAN & CO. LTD. | ESTABLISHED 1838 | TIMESOFINDIA.COM | EPAPER.TIMESOFINDIA.COM MANGALURU | THURSDAY, AUGUST 31, 2017 | PAGES 16 | PRICE ₹ 4.50

THE TIMES OF INDIA

Delhi HC expressed unhappiness over the delay in the probe into the death of Sunanda Pushkar, P 6

# DK, Udupi dists will celebrate Bakrid on Sept 1

There will be general holiday on Friday, September 1, in Dakshina Kannada and Udupi districts as Bakrid will be celebrated on that day in the coastal districts.

The state government had earlier announced September 2, Saturday, as Bakrid holiday. However, the order was modified declaring general holiday for Dakshina Kannada and Udupi districts on Friday. For rest of Karnataka, the holiday will be on Saturday. P 2

# DK, Udupi districts will celebrate Bakrid on Sept 1

TIMES NEWS NETWORK

**Mangaluru:** Friday (September 1) will be a general holiday in Dakshina Kannada and Udupi districts as Bakrid will be celebrated on that day in the coastal districts.

The state government had earlier announced September 2 (Saturday) as Bakrid holiday. However, the order was modified declaring general holiday for DK and Udupi districts on Friday. For rest of Karnataka, the holiday will be on Saturday.

Schools, colleges and government offices will function as usual on Saturday, said DK district minister Ramanath Rai.

**No illegal slaughtering**

Meanwhile, DK deputy commissioner K G Jagadeesha has warned against illegal slaughtering and transportation of animals during the festival.

In a release issued on Wednesday, the DC said those indulging in illegal slaughtering and transportation of animals will be punished.

While appealing people not to violate rules pertaining to slaughtering and transportation of animals during festival, the DC also warned those taking law into their hands in the name of animal protection. "If anybody come across illegal transportation and slaughtering of animals, he or she should inform the police and not take law into their hands. Police will take strict action against such people," the DC warned.

He also directed police to make proper bandobast besides asking tahsildars conduct peace meetings in their respective taluks to ensure peaceful celebration of festival. "These measures are being taken to ensure peaceful celebration of festival," said DC.

On Tuesday, the DC had held a meeting to discuss about various preparations to be made ahead of festival which is on Friday in the district.

ಸಂಧಿಲಿನ್
ಗಂಟುನೋವು, ಬೆನ್ನು ನೋವು,
ಮಾಂಸ ಖಂಡಗಳ ಸೆಳೆತ,
ನರ, ವಾತ ಸಂಬಂಧಿ
ನೋವಿಗೆ ಶೀಘ್ರ ಪರಿಣಾಮಕಾರಿ
SDM
ISO / GMP CERTIFIED
sdmaph@gmail.com
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ
ಆಯುರ್ವೇದ ಫಾರ್ಮಸಿ

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ

SUPER SALE
AUGUST 27 - SEPT
Udaya

Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ಗುರುವಾರ, ಆಗಸ್ಟ್ 31, 2017 ಬೆಲೆ: ₹ 5-00 ವಿದೇಶ ಬೆಲೆ: ₹ 6-00

# ಉಡುಪಿ-ದ.ಕ.: ಶುಕ್ರವಾರ ಬಕ್ರೀದ್ ರಜೆ

**ಬೆಂಗಳೂರು, ಆ. 30:** ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯುಲ್ಲಿ ಸೆ. 1ರಂದು ಶುಕ್ರವಾರ ರಜೆ ಘೋಷಿಸಲಾಗಿದೆ.

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಮುಸ್ಲಿಮರು ಶುಕ್ರವಾರ ಬಕ್ರೀದ್ ಹಬ್ಬ ಆಚರಣೆ ಮಾಡಲಿದ್ದಾರೆ. ಶನಿವಾರದ ಬದಲಿಗೆ ಶುಕ್ರವಾರವೇ ರಜೆ ನೀಡುವ ಬಗ್ಗೆ ಅಲ್ಲಿನ ಜಿಲ್ಲಾಧಿಕಾರಿಗಳು ಮನವಿ ಮಾಡಿದ್ದರು.

ಜತೆಗೆ, ಕರ್ನಾಟಕ ವಕ್ಫ್ ಮಂಡಳಿ ಸಹ ಚಂದ್ರ ದರ್ಶನ ಒಂದು ದಿನ ಮುಂಚಿತವಾಗಿ ಆಗುವುದರಿಂದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಮಾತ್ರ ಒಂದು ದಿನ ಮುಂಚಿತವಾಗಿ ರಜೆ ಘೋಷಿಸಬಹುದು ಎಂದು ಅಭಿಪ್ರಾಯಪಟ್ಟಿತ್ತು.

ಹೀಗಾಗಿ, ರಾಜ್ಯ ಸರಕಾರ ಎರಡೂ ಜಿಲ್ಲೆಗಳಿಗೆ ಅನ್ವಯಿಸುವಂತೆ ಶುಕ್ರವಾರ ರಜೆ ಘೋಷಿಸಿದೆ. ಉಳಿದ ಜಿಲ್ಲೆಗಳಿಗೆ ಈಗಾಗಲೇ ಘೋಷಿಸಿರುವಂತೆ ಸೆ. 2ರಂದು ಶನಿವಾರ ಬಕ್ರೀದ್ ರಜೆ ಮುಂದುವರಿಯುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಗುರುವಾರ,31 ಆಗಸ್ಟ್ 2017 | ಪುಟಗಳು: 14+4+4(UDP 6, PTR+4) | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 35
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ | ಚಿತ್ರ
PRIDE



ಲೋಕಪಾಲ ಜಾರಿಗೊಳಿಸಿ, ಇಲ್ಲದೆ ಹೋದ್ರೆ ಹೋರಾಟ: ಮೋದಿಗೆ ಅಣ್ಣಾ ಎಚ್ಚರಿಕೆ P10

ಸಾರ್ವಜನಿಕ ವಲಯದ ಪ್ರಮುಖ ಹುದ್ದೆಗಳು ಒಬಿಸಿ ಕೆನೆಪದರಕ್ಕೆ ಸೇರ್ಪಡೆ: ಕೇಂದ್ರ ಮಹತ್ವದ ತೀರ್ಮಾನ P10

ಶ್ರೀಲಂಕಾ ವಿರುದ್ಧ 4ನೇ ಏಕದಿನ ಇಂದು: ಧೋನಿಗಿದು ಮಹತ್ವದ 300ನೇ ಪಂದ್ಯ P12

# ದಕ್ಷಿಣ ಕನ್ನಡ, ಉಡುಪಿಯಲ್ಲಿ ನಾಳೆ ಬಕ್ರೀದ್ ರಜೆ

**ಮಂಗಳೂರು:** ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಬಕ್ರೀದ್ ಹಬ್ಬ ಸೆ.1ರಂದು ನಡೆಯುವ ಪ್ರಯುಕ್ತ ಉಭಯ ಜಿಲ್ಲೆಯಲ್ಲಿ ಅಂದು ಸಾರ್ವತ್ರಿಕ ರಜೆ ಘೋಷಿಸಿ ರಾಜ್ಯ ಸರಕಾರ ಅಧಿಕೃತವಾಗಿ ಆದೇಶಿಸಿದೆ. ಸೆ.2ರಂದು ನಿಗದಿಯಾಗಿದ್ದ ಬಕ್ರೀದ್ ರಜೆ ಬದಲಾಯಿಸಿ, ದ.ಕ. ಜಿಲ್ಲೆಯಲ್ಲಿ ಸೆ.1ರಂದು ಸರಕಾರಿ ಕಚೇರಿಗಳಿಗೆ, ಶಾಲಾ ಕಾಲೇಜುಗಳಿಗೆ ರಜೆ ನೀಡಲು ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಸರಕಾರ ಸೆ.2ರಂದು ಎಂದಿನಂತೆ ಶಾಲಾ ಕಾಲೇಜುಗಳು, ಸರಕಾರಿ ಕಚೇರಿಗಳು ಕಾರ್ಯನಿರ್ವಹಿಸಲಿದೆ ಆ ಪ್ರಕಾರ ಆದೇಶ ಹೊರಡಿಸಲಾಗಿದೆ ಎಂದು ಅರಣ್ಯ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಬಿ. ರಮಾನಾಥ ರೈ ತಿಳಿಸಿದ್ದಾರೆ.

**ಮುಸ್ಲಿಂ ಒಕ್ಕೂಟ ಕೃತಜ್ಞತೆ:** ಬಕ್ರೀದ್ ಹಬ್ಬದ ರಜೆಯನ್ನು ಸೆ.2ರ ಬದಲಿಗೆ 1ರಂದು ನಿಗದಿಪಡಿಸಿದ ರಾಜ್ಯ ಸರಕಾರ, ಸಚಿವರು, ಮುಖ್ಯ ಸಚೇತಕರು ಮತ್ತು ಶಾಸಕರನ್ನು ದಕ ಜಿಲ್ಲಾ ಮುಸ್ಲಿಂ ಸಂಘಟನೆಗಳ ಒಕ್ಕೂಟ ಕೃತಜ್ಞತೆ ಸಲ್ಲಿಸಿದೆ. ರಜೆ ಬದಲಾವಣೆ ಮಾಡಲು ಒಕ್ಕೂಟ ಮನವಿ ಮಾಡಿತ್ತು ಎಂದು ಒಕ್ಕೂಟದ ಅಧ್ಯಕ್ಷ ಕೆ.ಅಶ್ರಫ್ ತಿಳಿಸಿದ್ದಾರೆ.

~ಮುಂಜಾನೆ ಮಾತು ~
ಸಮಸ್ಯೆಗಳಿವೆ, ನೊಂದಿರುತ್ತೇವೆ. ಕನ್ನಡಿಯ ಮುಂದೆ ನಿಂತು ವಿಶ್ವಾಸದಿಂದ ಅವಲೋಕಿಸಿದರೆ ಅವುಗಳನ್ನು ಪರಿಹರಿಸಬಲ್ಲ ಯೋಗ್ಯ ವ್ಯಕ್ತಿ ಅಲ್ಲಿ ಕಾಣುತ್ತಾನೆ.

ವಿಜಯವಾಣಿ

ಕನ್ನಡಿಗರ ಧ್ವನಿ

ನಂ.1* ಕನ್ನಡ ದಿನಪತ್ರಿಕೆ



ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI ● MANGALURU ಮಂಗಳೂರು ● ಸಂಪುಟ 6 ● ಸಂಚಿಕೆ 152

vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 31 ಆಗಸ್ಟ್ 2017 | ಗುರುವಾರ

# ದ.ಕ, ಉಡುಪಿ ಸೆ.1ರಂದು ಬಕ್ರೀದ್ ಸಾರ್ವತ್ರಿಕ ರಜೆ

**ಮಂಗಳೂರು:** ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಬಕ್ರೀದ್ ಹಬ್ಬವು ಸೆ.1ರಂದು ನಡೆಯುವ ಪ್ರಯುಕ್ತ ಉಭಯ ಜಿಲ್ಲೆಯಲ್ಲಿ ಅಂದು ಸಾರ್ವತ್ರಿಕ ರಜೆ ಘೋಷಿಸಿ ರಾಜ್ಯ ಸರ್ಕಾರ ಆದೇಶಿಸಿದೆ. ಸೆ.2ರಂದು ನಿಗದಿಯಾಗಿದ್ದ ಬಕ್ರೀದ್ ರಜೆಯನ್ನು ಬದಲಾಯಿಸಿ, ಈ ಎರಡು ಜಿಲ್ಲೆಗಳಲ್ಲಿ ಸೆ.1ರಂದು ಸರ್ಕಾರಿ ಕಚೇರಿಗಳಿಗೆ, ಶಾಲಾ ಕಾಲೇಜುಗಳಿಗೆ ರಜೆ ನೀಡಲು ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದ್ದು, ಆ ಪ್ರಕಾರ ಆದೇಶ ಹೊರಡಿಸಲಾಗಿದೆ. ಸೆ.2ರಂದು ಎಂದಿನಂತೆ ಶಾಲಾ ಕಾಲೇಜುಗಳು, ಸರ್ಕಾರಿ ಕಚೇರಿಗಳು ಕಾರ್ಯನಿರ್ವಹಿಸಲಿವೆ ಎಂದು ದ.ಕ. ಜಿಲ್ಲಾ ಉಸ್ತುವಾರಿ ಸಚಿವ ಬಿ. ರಮಾನಾಥ ರೈ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಎರಡು ಜಿಲ್ಲೆಗಳಲ್ಲಿ ಮುಸ್ಲಿಂ ಬಾಂಧವರು ಸೆ.1ರಂದು ಬಕ್ರೀದ್ ಹಬ್ಬ ಆಚರಿಸುವುದಾಗಿ ಹೇಳಿದ್ದು, ಅದೇ ದಿನ ರಜೆ ಘೋಷಿಸಲು ಕೋರಿದ್ದಾರೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ. ಈ ಭಾಗದಲ್ಲಿ ಒಂದು ದಿನ ಮುಂಚಿತವಾಗಿ ಚಂದ್ರದರ್ಶನ ಆಗುವುದರಿಂದ ಅದೇ ದಿನ ರಜೆ ಘೋಷಿಸಬಹುದು ಎಂದು ರಾಜ್ಯ ವಕ್ಫ್ ಮಂಡಳಿಯೂ ಅಭಿಪ್ರಾಯಪಟ್ಟಿದೆ. ಈ ಹಿನ್ನೆಲೆಯಲ್ಲಿ ದ.ಕ, ಉಡುಪಿ ಜಿಲ್ಲೆಗಳಿಗೆ ಮಾತ್ರ ಅನ್ವಯವಾಗುವಂತೆ ರಜೆ ಬದಲಾವಣೆ ಮಾಡಲಾಗಿದೆ ಎಂದು ಸರ್ಕಾರದ ಅಧೀನ ಕಾರ್ಯದರ್ಶಿ ಡಾ.ಬಿ.ಎಸ್.ಮಂಜುನಾಥ ಸ್ವಾಮಿ ಸರ್ಕಾರದ ಆದೇಶದಲ್ಲಿ ತಿಳಿಸಿದ್ದಾರೆ.